# ಭಕ್ತ ಕನಕದಾಸರು – ೧

**ಕಥೆ : ಟಿ.ಎಂ. ಸುಂದರರಾಮನ್** **ಚಿತ್ರ: ಶಂಕರ್**

ಕೃಷ್ಣದೇವರಾಯನು ವಿಜಯನಗರ ಸಾಮ್ರಾಜ್ಯವನ್ನು ಆಳುತ್ತಿದ್ದಾಗ ಬಾಡವೆಂಬ ಗ್ರಾಮದಲ್ಲಿ ಬೀರಪ್ಪನೆಂಬ ಢಣಾಯಕನಿದ್ದನು. ಅವನಿಗೆ ತಿರುಪತಿ ತಿಮ್ಮಪ್ಪನ ಅನುಗ್ರಹದಿಂದ ಹುಟ್ಟಿದ ಮಗನಿಗೆ 'ತಿಮ್ಮಪ್ಪ'ನೆಂದೇ ಹೆಸರಿಟ್ಟರು. ತಿಮ್ಮಪ್ಪನು ಬಾಲ್ಯದಿಂದಲೇ ದೈವಭಕ್ತ. ಕವಿತಾಶಕ್ತಿಯೂ ಅವನಲ್ಲಿತ್ತು.


**1** ಬಾಲಕ ತಿಮ್ಮಪ್ಪನು ತನ್ನ ಸ್ನೇಹಿತರೊಂದಿಗೆ ಒಂದು ಮರದ ಅಡಿಯಲ್ಲಿ ಕುಳಿತು ಭಜನೆ ಹಾಡುತ್ತಿದ್ದ. ಆಗ ಅಲ್ಲಿಗೆ ಒಂದು ಹಾವು ಬಂತು. ತಿಮ್ಮಪ್ಪ ಸ್ನೇಹಿತರು ಹೆದರಿ ಪಲಾಯನ ಮಾಡಿದರು. ಸ್ವಲ್ಪ ಹೊತ್ತಾದ ಮೇಲೆ ಅವರು ಮರಳಿ ಬಂದರು.




**2** ಒಂದು ದಿನ ತಿಮ್ಮಪ್ಪನು ಗದ್ದೆಯಲ್ಲಿ ಕೆಲಸ ಮಾಡುತಿದ್ದ. ಅಲ್ಲಿ ಅವನಿಗೆ ಚಿನ್ನದ ನಿಧಿ ಸಿಕ್ಕಿತು.




**3** ಕನಕನು ಸೇವಾಕಾರ್ಯಗಳಿಗಾಗಿ ಅಪಾರ ಹಣವನ್ನು ವಿನಿಯೋಗಿಸಿದ. ಅವನೊಬ್ಬ ಉತ್ತಮ ಕವಿಯೂ ಆಗಿದ್ದ. ರಾಜನಿಗೆ ಈ ವಿಷಯ ತಿಳಿದು, ಕನಕನನ್ನು ಗೌರವದಿಂದ ತನ್ನ ಆಸ್ಥಾನಕ್ಕೆ ಕರೆಸಿದ.




4 ಕನಕನಾಯಕನು ಕೆಲವು ಕಾಲ ಜನರ ಸೇವಾಕಾರ್ಯಗಳಲ್ಲಿ ನಿರತನಾದ. ಒಂದು ದಿನ ಅವನಿಗೆ ಕನಸಿನಲ್ಲಿ ಶ್ರೀಹರಿಯು ಕಾಣಿಸಿಕೊಂಡು, ಅವನನ್ನು 'ತಿರುಪತಿಗೆ ಬಾ' ಎಂದು ಕರೆದಂತೆ ಭಾಸವಾಯಿತು. ಹೀಗೆಂದು ಕರೆದ ಭಗವಂತನ ಹಿಂದೆ ಕನಕನು ಓಡುತ್ತಿದ್ದಾಗಲೇ ಕನಸೊಡೆಯಿತು. ಹಲವು ಬಾರಿ ಇದೇ ರೀತಿ ಕನಸು ಬಿದ್ದಾಗ, ಅವನಿಗೆ ಏನು ಮಾಡಬೇಕೋ ತಿಳಿಯದಾಯಿತು.



5 ಅಷ್ಟರಲ್ಲಿ ಕನಕನು ರಾಜರಿಗೆ ವಿರುದ್ಧವಾಗಿದ್ದ ದುಷ್ಟರನ್ನು ಸದೆಬಡಿಯಬೇಕಾಯಿತು. ಆದರೆ ವೈರಿಗಳು ಪ್ರಬಲರಾಗಿದ್ದರು; ಕನಕನಿಗೆ ಸೋಲಾಯಿತು. ಯುದ್ಧದಲ್ಲಿ ಅವನು ಗಾಯಾಳುವಾಗಿ ನರಳಿದ. ಅವನನ್ನು ದ್ವೇಷಿಸುತ್ತಿದ್ದ ಒಬ್ಬಾತ ಅವನಿಗೆ ಹಿಂಬದಿಯಿಂದ ಇರಿದ.




6 ಮತ್ತೊಮ್ಮೆ ದೇವರು ಕನಕನಾಯಕನ ಸ್ವಪ್ನದಲ್ಲಿ ಕಾಣಿಸಿಕೊಂಡ.





ಶ್ರೀಹರಿಯು ತನ್ನ ದಿವ್ಯರೂಪವನ್ನು ಅವನಿಗೆ ತೋರಿಸಿದ. ಭಗವಂತನ ದಿವ್ಯದರ್ಶನದಿಂದ ಅವನ ಗಾಯವೆಲ್ಲವೂ ವಾಸಿಯಾಯಿತು. ಆನಂದದಿಂದ ಪರವಶನಾಗಿ ಅವನು ನರ್ತಿಸತೊಡಗಿದ.

7 ದೇವರ ದರ್ಶನದಿಂದ ವೈರಾಗ್ಯಹೊಂದಿದ ಕನಕನಾಯಕನು ಪ್ರಾಪಂಚಿಕ ಜೀವನವನ್ನು ತ್ಯಜಿಸಿದ. ಆಡಂಬರದ ಜೀವನವನ್ನು ಬಿಟ್ಟು, ಸರಳವಾದ ಜೀವನವನ್ನು ಅವನು ನಡೆಸಲಾರಂಭಿಸಿದ. ವಾದ್ಯಗಳನ್ನು ನುಡಿಸುತ್ತ, ಕೀರ್ತನೆಗಳನ್ನು ಹಾಡುತ್ತ ಅವನು ಊರಿಂದೂರಿಗೆ ಸಂಚಾರ ಹೊರಟ.



8


ಕನಕದಾಸನು ತಿರುಪತಿಯಲ್ಲಿ ಒಂದೆಡೆ ಒಂಟಿಕಾಲಿನ ಮೇಲೆ ನಿಂತು ತಪಸ್ಸು ಮಾಡಿದ. ತನ್ನನ್ನು ದಾಸನನ್ನಾಗಿ ಮಾಡಿಕೊಳ್ಳೆಂದು ಅವನು ದೇವರನ್ನು ಬೇಡಿಕೊಂಡ. ಅವನ ಮುಂದೆ ಕಾಣಿಸಿಕೊಂಡ ಪರಮಾತ್ಮನು ಅವನ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿದ.





ದೇವರ ನಾಮ ಸಂಕೀರ್ತನೆಯಲ್ಲಿ ಉನ್ಮತ್ತನಾಗಿದ್ದುಕೊಂಡೇ ಅವನು ಬಾಡ ಗ್ರಾಮಕ್ಕೆ ಮರಳಿದ. ಅವನ ತಾಯಿ ಆಗ ದೈವಾಧೀನಳಾಗಿದ್ದಳು. ಅವನ ಪಾಲಿಗೆ ಉಳಿದಿದ್ದ ಒಂದೇ ಒಂದು ಪ್ರಾಪಂಚಿಕ ಬಂಧನವೂ ಈಗ ಕಡಿದು ಹೋಗಿತ್ತು. ಅವನು ಸಂಪೂರ್ಣವಾಗಿ ತನ್ನನ್ನು ದೇವರಿಗೆ ಸಮರ್ಪಿಸಿಕೊಂಡ. ಕನಕಪ್ಪ 'ಕನಕದಾಸ'ನಾದ.

9

ಕನಕನು ವ್ಯಾಸತೀರ್ಥರನ್ನು ತನ್ನ ಗುರುವಾಗಿ ಸ್ವೀಕರಿಸಿದ್ದ. ಅವರನ್ನು ಕಾಣಲು ಅವರ ಆಶ್ರಮಕ್ಕೆ ಹೋದಾಗ ಅಲ್ಲಿ ಕೆಲವರು ...





10




ಕನಕ ಅಲ್ಲಿಗೆ ಬಂದಿರುವುದಾಗಿ ವ್ಯಾಸತೀರ್ಥರಿಗೆ ದಿವ್ಯದೃಷ್ಟಿಯಿಂದ ತಿಳಿದುಬಂತು. ಅವರು ತಾವಾಗಿಯೇ ಹೊರಬಂದು ಅವನನ್ನು ಒಳಗೆ ಕರೆದುಕೊಂಡು ಹೋದರು. ಅಲ್ಲಿ ಅವರು ಕನಕನಿಗೆ ದೀಕ್ಷೆ ನೀಡಿ, ಅವನನ್ನು ತನ್ನ ಶಿಷ್ಯನನ್ನಾಗಿ ಸ್ವೀಕರಿಸಿದರು.

11

ಇದು ಇನ್ನೂ ಬುದ್ಧಿ ಬೆಳೆಯದ ಶಿಷ್ಯಂದಿರ ಅಸಹನೆಗೆ ಕಾರಣವಾಯಿತು.






ಯಾವ 'ಅಹಂ' ಮನುಷ್ಯನನ್ನು ಸಂಸಾರಿಯನ್ನಾಗಿ, ಕಾಮಕಾಂಚನಾಸಕ್ತನನ್ನಾಗಿ ಮಾಡುವುದೋ ಅದು 'ಕೆಟ್ಟ ಅಹಂ'. 'ದಾಸ ಅಹಂ', ಎಂದರೆ ನಾನು ಭಗವಂತನ ದಾಸ, ನಾನು ಆತನ ಭಕ್ತ ಎಂಬ ಭಾವ ಕೆಡುಕಾದುದೇನಲ್ಲ. ಅದಕ್ಕೆ ಬದಲು ಅದು ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.

— ಶ್ರೀರಾಮಕೃಷ್ಣರು

